**ಓ.ಎಸ್. ನಂಃ 234/2017**

**ಪಿ.ಡಬ್ಲ್ಯೂಃ 1**

**ದಿನಾಂಕ 07.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಬಿ.ಜಿ. ವಕೀಲರಿಂದಃ**

1. ನನ್ನ ತಂದೆಯ ಹೆಸರು ಪುಟ್ಟಪ್ಪ ಅಂತ ಇರುತ್ತದೆ. ನನ್ನ ತಾಯಿಯ ಹೆಸರು ನಂಜಮ್ಮ. ನನ್ನ ತಂದೆ-ತಾಯಿಗೆ ನಾವು ಒಟ್ಟು 2 ಜನ ಮಕ್ಕಳು ಅವರು ನಾನು ಮತ್ತು 1 ನೇ ಪ್ರತಿವಾದಿ. ನನ್ನ ತಂದೆ-ತಾಯಿಗೆ ಮಹದೇವ ಎನ್ನುವ ಮಗನಿದ್ದ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ಸಹೋದರನಾದ ಮಹದೇವರವರು ಮರಣ ಹೊಂದಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

2. ನಾನು ಮತ್ತು 1 ನೇ ಪ್ರತಿವಾದಿ ಅನೋನ್ಯವಾಗಿದ್ದೇವೆ ಎಂದರೆ ಸರಿಯಲ್ಲ. ನನ್ನ ಮದುವೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನೆನಪಿಲ್ಲ ಆದರೆ ನನ್ನ ಮದುವೆ ಆಗಿ 40 ವರ್ಷಗಳಾಗಿರುತ್ತವೆ. 1990 ರ ಪೂರ್ವದಲ್ಲಿಯೇ ನನ್ನ ವಿವಾಹವಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಮದುವೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನೆನಪಿಲ್ಲ ಎಂದು ನುಡಿದಿರುತ್ತಾರೆ. ನನ್ನನ್ನು ಹೊಳೆನರಸೀಪುರದ ತೇಜೂರು ಮಾಯೆಗೌಡನಹಳ್ಳಿಗೆ ವಿವಾಹ ಮಾಡಿಕೊಟ್ಟಿರುತ್ತಾರೆ. ನನ್ನ ಗಂಡನ ಹೆಸರು ಶ್ರೀಕಂಠಪ್ಪ ಎಂದರೆ ಸರಿ. ನನ್ನ ಗಂಡನಿಗೆ ಸೇರಿದ ಯಾವುದೇ ಆಸ್ತಿ ಇಲ್ಲ.

3. ನನ್ನ ವಿವಾಹದ ನಂತರ ನನ್ನ ತಾಯಿ ಮತ್ತು 1 ನೇ ಪ್ರತಿವಾದಿ ಕೋಳೂರು ಗ್ರಾಮದಲ್ಲಿಯೇ ನೆಲೆಸಿದ್ದರು ಎಂದರೆ ಸರಿ. ನಮ್ಮ ಮನೆಯಲ್ಲಿ ಗಂಡು ಮಕ್ಕಳು ಇಲ್ಲದಿದ್ದ ಕಾರಣ 1 ನೇ ಪ್ರತಿವಾದಿಯ ಗಂಡನನ್ನು ಮನೆಯ ಅಳಿಯನಾಗಿ ನನ್ನ ತವರು ಮನೆಯಲ್ಲಿಯೇ ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು 7 ನೇ ತರಗತಿಯವರಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ವ್ಯವಹಾರಿಕ ಜ್ಞಾನವಿದೆ ಎಂದರೆ ಸರಿಯಲ್ಲ.

4. ಕೊಳೂರು ಗ್ರಾಮದ 1 ಎಕರೆ 30 ಗುಂಟೆ ಜಮೀನನ್ನು ನೀವು ಯಾರಿಗೆ ಮಾರಾಟ ಮಾಡಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾವು ಆ ರೀತಿಯ

ಯಾವುದೇ ಜಮೀನು ಮಾರಾಟ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಹೊರತುಪಡಿಸಿ ನನ್ನ ತವರು ಮನೆಗೆ ಸೇರಿದ ಬೇರೆ ಯಾವುದೇ ಆಸ್ತಿ ಇಲ್ಲ.

8. ಕೊಳೂರು ಗ್ರಾಮದಲ್ಲಿ ನನ್ನ ತಾಯಿಯಾದ ನಂಜಮ್ಮನಿಗೆ ಸೇರಿದ ಒಂದು ಮನೆ ಇದೆ ಎಂದರೆ ಸರಿ. ಸದರಿ ಮನೆಯನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿಗೆ ಸೇರಿದ ಸದರಿ ಮನೆಯಲ್ಲಿಯು ಸಹ ನನಗೆ ಸಮಾನ ಪಾಲು ಇದೆ ಎಂದರೆ ಸರಿ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ 2-3 ತಿಂಗಳ ನಂತರ ನನಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿ ಸುಮಾರು 20 ವರ್ಷಗಳಾಗಿರಬಹುದು.

9. ನಿಪಿ.2 ರ ಕ್ರಯ ಪತ್ರದಲ್ಲಿ ಯಾವ ಉದ್ದೇಶಕ್ಕಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದು ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನಗೆ ಹಣ ಕೊಡಲು ಮತ್ತು ನಮ್ಮ ಕುಟುಂಬದ ಸಾಲ ತೀರಿಸುವ ಉದ್ದೇಶಕ್ಕಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲಾಗಿದೆ ಎಂದು ನಿಪಿ.2 ರ ಕ್ರಯ ಪತ್ರದಲ್ಲಿ ಬರೆದಿರುತ್ತದೆ ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

10. ನಾನು ಈ ದಾವೆಯನ್ನು 2017 ರಲ್ಲಿ ಹೂಡಿದ್ದು, ದಾವಾ ಆಸ್ತಿಗೆ ಸಂಬಂಧಪಟ್ಟ 2017 ರ ಸಾಲಿನ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ದಾವಾ ಆಸ್ತಿಯ 2017 ರ ಸಾಲಿನ ಪಹಣಿಯು ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ.

11. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯು ತಮ್ಮಯ್ಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಈಗ 2 ವರ್ಷಗಳ ಹಿಂದೆ ನನ್ನ ತಾಯಿ ಮೃತಪಟ್ಟಿದ್ದಾಗ ನಾನು ಊರಿಗೆ ಹೋದಾಗ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯು ತಮ್ಮಯ್ಯ ಎನ್ನುವವರಿಗೆ ಮಾರಾಟ ಮಾಡಿದ ವಿಷಯ ನನಗೆ ಗೊತ್ತಾಗಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

12. ದಿನಾಂಕ 16.04.2016 ರಲ್ಲಿ ನಾನು ದಾವಾ ಆಸ್ತಿಯ ಖಾತೆಯನ್ನು ಖರೀದಿದಾರನಾದ ಸದರಿ ತಮ್ಮಯ್ಯರವರ ಹೆಸರಿಗೆ ವರ್ಗಾವಣೆ ಮಾಡಬಾರದು ಎಂದು ಹೇಳಿ ಯಾವುದೇ ತಕರಾರು ಅರ್ಜಿಯನ್ನು ನೀಡಿರುವುದಿಲ್ಲ. ನಾನು ನೀಡಿದ್ದ ಸದರಿ ತಕರಾರು ಅರ್ಜಿಯನ್ನು ಆರ್.ಆರ್.ಟಿ ಪ್ರಕರಣ ಸಂಖ್ಯೆ 14/2016-17 ರಂತೆ ದಾಖಲಾಗಿರುತ್ತದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಯಾವುದೇ ತಕರಾರು ಅರ್ಜಿಯನ್ನು ನೀಡಿರುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಆರ್.ಆರ್.ಟಿ ಪ್ರಕರಣದಲ್ಲಿ ನೀವು ಎಷ್ಟು ಬಾರಿ ಹಾಜರಾಗಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ಎಂದಿಗೂ ಸಹ ಆರ್.ಆರ್.ಟಿ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಆರ್.ಆರ್.ಟಿ ಪ್ರಕರಣ ಸಂಖ್ಯೆ 14/2016-17 ವಿಚಾರಣೆಗೆ ಬಾಕಿ ಇರುವಾಗಲೇ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

13. ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಯಿಂದ ಖರೀದಿಸಿರುವ ಸದರಿ ಖರೀದಿದಾರನಾದ ತಮ್ಮಯ್ಯರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಈಗ 2 ವರ್ಷಗಳ ಹಿಂದೆ ನನ್ನ ತಾಯಿ ಮೃತಪಟ್ಟಿದ್ದು, ನನ್ನ ತಾಯಿ ಮರಣ ಹೊಂದುವ ಪೂರ್ವದಲ್ಲಿ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಒಳ್ಳೆಯ ಸಂಬಂಧವಿದ್ದು, ನನ್ನ ತಾಯಿ ಮರಣ ಹೊಂದಿದ ನಂತರ ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಸಂಬಂಧ ಅಷ್ಟೊಂದು ಚೆನ್ನಾಗಿಲ್ಲ.ಈ ದಾವೆಯನ್ನು ನಾನು ಮತ್ತು 1 ನೇ ಪ್ರತಿವಾದಿ ಸೇರಿ ಹೂಡಿರುತ್ತೇವೆ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಾಕಾಶ ಕೋರಿದ್ದು, ಕಾಲಾವಾಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**